# ***Form No.4.***

# ***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 4/2025**

**CW 5**

**PW4**

| | | |
|---|---|---|
| ಸಾಕ್ಷಿಯ ಹೆಸರು | ಃ | ಕೃಷ್ಣ ಪೂಜಾರಿ |
| ತಂದೆ ಹೆಸರು | ಃ | ಚನ್ನ ಪೂಜಾರಿ |
| ಪ್ರಾಯ | ಃ | 53 ವರ್ಷ |
| ಉದ್ಯೋಗ | ಃ | ಪಿ.ಸಿ. ಹಿರಿಯಡ್ಕ ಪೋಲೀಸ್ ಠಾಣೆ |
| ವಾಸ | ಃ | ಮುಧ್ರಾಡಿ |

ದಿನಾಂಕ : **01.08.2025** ರಂದು ಪಿಡಬ್ಲ್ಯೂ - 4 / ಸಿಡಬ್ಲ್ಯೂ - 5 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು 2017 ರಿಂದ 2024 ರವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 06.04.2024 ರಂದು ನಾನು ಮತ್ತು ಚಾಸಾ 1,4 ಮತ್ತು 6 ರವರು ಕೆರ್ವಾಶೆ ಗ್ರಾಮದಲ್ಲಿ ರೌಂಡ್ಸ್ ಮಾಡುತ್ತಿದ್ದಾಗ, ಮಧ್ಯಾಹ್ನ 2.30 ರ ಸಮಯದಲ್ಲಿ ಚಾಸಾ 1 ರವರಿಗೆ ಬಟ್ಟ ಹೊಳೆ ಬಳಿ ಮರಳು ಸಾಗಾಟದ ಬಗ್ಗೆ

CC 4/2025
CW5
PW4

ಖಚಿತ ಮಾಹಿತಿ ಬಂದಿರುತ್ತದೆ. ಅದರಂತೆ 2.45 ರ ಸಮಯದಲ್ಲಿ ಕೆರ್ವಾಶೆ ಬಜಗೋಳಿ ರಸ್ತೆಯಲ್ಲಿ ತಪಾಸಣೆ ಮಾಡುತ್ತಿದ್ದಾಗ, ಕೆರ್ವಾಶೆ ಗರಡಿ ಕಡೆಯಿಂದ ಕೆಎ 20 ಸಿ 3207 407 ಟೆಂಪೂ ಬರುತ್ತಿದ್ದು, ಅದನ್ನು ನಿಲ್ಲಿಸಿ ಪರೀಕ್ಷಿಸಿದಾಗ, ಅದರಲ್ಲಿ ಮರಳು ಮಿಶ್ರಿತ ಚರಳು ತುಂಬಿಸಿದ್ದು ಕಂಡು ಬಂದಿರುತ್ತದೆ. ವಾಹನದಲ್ಲಿದ್ದವರನ್ನು ವಿಚಾರಿಸಿದಾಗ ಅದನ್ನು ಸಾಗಿಸಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಮರಳು ಮತ್ತು ಚರಳನ್ನು ಎಲ್ಲಿಂದ ತಂದಿರುವುದು ಎಂದು ವಿಚಾರಿಸಿದಾಗ, ಕೆರ್ವಾಶೆ ಗ್ರಾಮದ ಬಟ್ಟ ಹೊಳೆಯಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ವಾಹನದಲ್ಲಿ 1 ರಿಂದ 3 ನೇ ಆರೋಪಿತರು ಇದ್ದರು. ಅವರು ಹೆಸರನ್ನು ತಿಳಿಸಿರುತ್ತಾರೆ. ನಂತರ ಸ್ಥಳಕ್ಕೆ ಚಾಸಾ 2 ಮತ್ತು ಚಾಸಾ 3 ರವರನ್ನು ಬರಮಾಡಿಕೊಂಡು, ಅವರ ಸಮಕ್ಷಮ ವಾಹನವನ್ನು ಮತ್ತು ಮರಳನ್ನು, ಮೂರು ರಬ್ಬರ್ ಬುಟ್ಟಿಗಳು, ಮೂರು ಕಬ್ಬಿಣದ ಹಾರೆಗಳನ್ನು ಮಹಜರು ಮುಖಾಂತರ ಮಧ್ಯಾಹ್ನ 3 ರಿಂದ ಸಂಜೆ 3.45 ರವರೆಗೆ ಮಹಜರು ತಯಾರಿಸಿ ಚಾಸಾ 1 ರವರು ವಸ್ತುಗಳನ್ನು ಅದರ ಮುಖಾಂತರ ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ನೋಡುತ್ತಿದ್ದು, ಅದನ್ನು ನಿಪಿ - 1 ಎಂದು ಗುರುತಿಸಲಾಗಿದೆ. ಅದರಲ್ಲಿನ ನನ್ನ ಸಹಿಯನ್ನು ನಿಪಿ - 1(ಡಿ) ಎಂದು ಗುರುತಿಸಲಾಯಿತು. ನಂತರ ಮಹಜರು ಕಾಲಕ್ಕೆ ನಿಪಿ - 3 ರಂತೆ ಫೋಟೋ ತೆಗೆದಿರುತ್ತಾರೆ. ಸದರಿ ದಿನ

CC 4/2025
CW5
PW4

ವಶಪಡಿಸಿಕೊಂಡಂತಹ 1 ರಿಂದ 3 ನೇ ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ. ವಶಪಡಿಸಿಕೊಂಡಂತಹ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ. ಈ ವಿಚಾರದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲುಃ</u> ಶ್ರೀಮತಿ ಎಂ.ಪಿ. ಆರೋಪಿತರ ಪರ ವಕೀಲರಿಂದಃ

ಚಾಸಾ 1 ರವರಿಗೆ ಮರಳು ಸಾಗಣಿಕೆ ಬಗ್ಗೆ ಮಾಹಿತಿ ಬಂದಿದೆ ಎಂದು ಹೇಳಿದ ಸಮಯದಲ್ಲಿ ನಾನು ಕೂಡಾ ಅವರ ಜೊತೆ ಇದ್ದೆ. ಆ ರೀತಿ ಕರೆಯು 2.30 ರ ಸಮಯದಲ್ಲಿ ಬಂದಿರುತ್ತದೆ. ಹಾಗೆ ಕರೆ ಮಾಡಿದವರು ಯಾರು ಎಂದು ತಿಳಿಸಿರುವುದಿಲ್ಲ. ಆದರೆ ಬಾತ್ಮೀದಾರರು ಬಟ್ಟ ಎನ್ನುವ ಜಾಗದಲ್ಲಿ ಮರಳು ತೆಗೆಯುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಹಾಗೆ ಕರೆ ಬರುವ ಸಮಯದಲ್ಲಿ ನಾವು ಕರ್ವಾಶೆಯಲ್ಲಿದ್ದು, ನಿಖರವಾದ ಸ್ಥಳ ಎಲ್ಲಿ ಎಂದು ಹೇಳಲು ಸಾಧ್ಯವಿರುವುದಿಲ್ಲ. 2.45 ರ ಸಮಯದಲ್ಲಿ ನಾವು ವಾಹನ ತಪಾಸಣೆ ಮಾಡುವ ಸ್ಥಳಕ್ಕೆ ಬಂದಿರುತ್ತೇವೆ. ನಾವು ಸ್ಥಳಕ್ಕೆ ಬಂದ ನಂತರ ಸುಮಾರು 2.55 ರ ಸಮಯದಲ್ಲಿ ವಾಹನ ಅಲ್ಲಿಗೆ ಬಂದಿರುತ್ತದೆ. ನಾವು ವಾಹನ ತಪಾಸಣೆ ಮಾಡುತ್ತಿದ್ದ ಸ್ಥಳದಿಂದ ಬಟ್ಟ ಎನ್ನುವ ಸ್ಥಳವು ನಮ್ಮ ಇಲಾಖಾ ವಾಹನದಲ್ಲಿ

CC 4/2025
CW5
PW4

ಹೋದಲ್ಲಿ ಸುಮಾರು 10 ನಿಮಿಷದ ದಾರಿಯಾಗಿರುತ್ತದೆ. ವಾಹನದಲ್ಲಿ ಮರಳು ತುಂಬಿಸಿ ವಾಹನ ಬರುತ್ತಿದೆ ಎಂದು ಹೇಳಿದ ಕಾರಣ, ನಾವು ನೇರವಾಗಿ ಬಟ್ಟ ಎನ್ನುವ ಸ್ಥಳಕ್ಕೆ ಹೋಗದೆ ವಾಹನ ತಪಾಸಣೆ ಮಾಡುವ ಸ್ಥಳಕ್ಕೆ ಬಂದಿರುತ್ತೇವೆ. ಹಾಗೆ ಕರೆ ಬಂದ ಸಮಯದಲ್ಲಿ ಯವಾ ವಾಹನದಲ್ಲಿ ಮರಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಅಥವಾ ಯಾರು ಮರಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ನಮಗೆ ಮಾಹಿತಿ ಬಂದಿರುವುದಿಲ್ಲ. ಮಾಹಿತಿ ನೀಡಿದವರನ್ನು ಕರೆಸುವ ಪ್ರಯತ್ನ ನಾವು ಮಾಡಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಹಾಗೆ ಯಾವುದೇ ಮರಳನ್ನು ಅಥವಾ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹೇಳಿದ ಹಾಗೆ ಯಾವುದೇ ಕಳ್ಳತನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕೆ ಸಂಖ್ಯೆಗಾಗಿ ನಿರಪರಾಧಿಗಳ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಬಟ್ಟಹೊಳೆ ಕೆರ್ವಾಶೆ ಪೇಟೆಯಿಂದ ಸುಮಾರು 5 – 6 ಕಿಲೋಮೀಟರ್ ದೂರವಿರಬಹುದು. ನಾವು ವಾಹನವನ್ನು ವಶಪಡಿಸಿಕೊಂಡ ಸಮಯದಲ್ಲಿ ನಮ್ಮ ಜೊತೆ ಚಾಲಕರಾದ ಆನಂದ್ , ಚಾಸಾ 1 , ಚಾಸಾ 4 ಮತ್ತು ಚಾಸಾ 6 ರವರು

ಇದ್ದರು. ಚಾಸಾ 2 ಮತ್ತು 3 ರವರು ಸಹಾ ಇದ್ದರು. ಚಾಸಾ 2 ಮತ್ತು 3 ರವರು ಸಮೀಪದಲ್ಲಿ ಹೋಗುತ್ತಿದ್ದು, ಅವರನ್ನು ಕರೆದುಕೊಂಡು ಬರಲಾಗಿತ್ತು. ಕೆರ್ವಾಶೆ ಪೇಟೆಯಲ್ಲಿ ಗ್ರಾಮಪಂಚಾಯತ್ ಮತ್ತು ಗ್ರಾಮ ಕರಣಿಕರ ಕಚೇರಿ ಇರುತ್ತದೆ. ಗ್ರಾಮ ಕರಣಿಕರನ್ನಾಗಲೀ ಅಥವಾ ಪಂಚಾಯತ್ ಅಧಿಕಾರಿಗಳನ್ನಾಗಲೀ ಮಹಜರು ಮಾಡುವ ಸಮಯದಲ್ಲಿ ಕರೆಸಿಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ವಾಹನ ತಪಾಸಣೆ ಮಾಡಿದ್ದೇವೆ ಎಂದು ಹೇಳುವ ಸ್ಥಳದ ಸುತ್ತಮುತ್ತ ಬೇರೆ ಮನೆಗಳು ಇರುವುದಿಲ್ಲ. ಕೆರ್ವಾಶೆ ಗ್ರಾಮದ ಕೊಡಮಣಿತ್ತಾಯ ಗರಡಿ ಬಳಿ ಯಾವುದೇ ಮಹಜರನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ಸಾಕ್ಷಿದಾರರ ಸಹಿಗಳನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ - 3 ಫೋಟೋವನ್ನು ಕೊಡಮಣಿತ್ತಾಯ ಗರಡಿ ಬಳಿ ತೆಗೆದಿರುವುದಿಲ್ಲ ಮತ್ತು ಈ ಪ್ರಕರಣಕ್ಕೆ ಪೂರಕವಾಗುವ ಸ್ಥಳದಲ್ಲಿ ತೆಗೆದಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.